ಒಂದು ಮುಖ್ಯ ಮಾನದಂಡ ಎನ್ನುವ ಗ್ರಹಿಕೆ ಇತ್ತು. ಕೇಳುಗರಿಗೆ ಸತ್ಯವನ್ನು ಮನವರಿಕೆ ಮಾಡಲು ಇದುವೆ ಋಜುಮಾರ್ಗ ಎಂದು ಅವರು ನಂಬಿದ್ದರು. ಆಧುನಿಕ ಸಮಾಜಗಳಲ್ಲಿ ಸತ್ಯವನ್ನು ಸುಳ್ಳು ಮಾಡಲು ಮತ್ತು ಸುಳ್ಳನ್ನು ಸತ್ಯ ಮಾಡಲು ಪೈಪೋಟಿಗೆ ಬಿದ್ದಂತೆ ಭಾಷಣ ಮಾಡುವವರ ಗೋಬೆಲ್ಸ್ ಸಂತತಿ ಜ್ವಲಿಸುತ್ತಲಿದೆ. ಅಂದ ಹಾಗೆ ಗೋಬೆಲ್ಸ್‌ನ ದೊರೆ ಹಿಟ್ಲರ್ ಜನರನ್ನು ಆಕರ್ಷಿಸುವಂತೆ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದ. ಧಾರ್ಮಿಕ ಸಂಗತಿಗಳನ್ನು ಆಧಾರವಾಗಿರಿಸಿಕೊಂಡು ದುಬಾರಿ ದಿರಿಸು ಧರಿಸಿ ಭಾವುಕ ಪದಪುಂಜಗಳು ಮತ್ತು ಹೊಸ ನುಡಿಗಟ್ಟುಗಳನ್ನು ಟಂಕಿಸಿ ಅದನ್ನು ಆಕರ್ಷಕವಾದ ಆಂಗಿಕ ಭಾಷೆಯಿಂದ ಡೆಲಿವರಿ ಮಾಡಿದರೆ ಸಾಕು, ಸಭಿಕರು ಇದು ನಮ್ಮದೆ ಕೂಸು ಎಂದು ಎತ್ತಿಕೊಳ್ಳುತ್ತಾರೆ.

ನಿರ್ದಿಷ್ಟ ರಾಜಕೀಯ ಪಕ್ಷಗಳ ಹಿತಾಸಕ್ತಿಗಳನ್ನು ಈಡೇರಿಸಲು ಹೀಗೆ ಸುಳ್ಳು ಮತ್ತು ಸತ್ಯಗಳನ್ನು ಬುಡಮೇಲು ಮಾಡುವ ಭಾಷಣಕಾರರನ್ನು ಇಂದು 'ಬಾಡಿಗೆ ಭಾಷಣಕಾರರು' ಎಂದು ಕರೆಯಲಾಗುತ್ತಿದೆ. ಒಮ್ಮೆ ಹೀಗೆ ಸಾರ್ವಜನಿಕವಾಗಿ ಸುಳ್ಳು ಹೇಳುವ ಧೈರ್ಯ ಮಾಡಿದರೆ ಮುಗಿಯಿತು; ಇಲ್ಲಿ ಸಿಕ್ಕ ಪರವಾನಗಿಯನ್ನು ಸುಲಭವಾಗಿ ಮತ್ತೆ ಮತ್ತೆ ನವೀಕರಿಸಬಹುದು. ಲಜ್ಜೆಗಾಸ್ಪದವಿಲ್ಲದೆ ಕಾಗೆಯ ಮೈಬಣ್ಣವನ್ನು ತಮಗೆ ಬೇಕಾದ ಬಣ್ಣಕ್ಕೆ ತಿರುಗಿಸಬಹುದು. ಮಾತನಾಡುವುದು ಎಷ್ಟು ಮುಖ್ಯವೋ ಮಾತನಾಡದಿರುವುದೂ ಅಷ್ಟೆ ಮುಖ್ಯ. ಆದ್ದರಿಂದಲೆ ಮಾತಿನ ಮೇಲೆ ನಿಗಾ ಇಡಬೇಕೆಂದು ಸಾಕಷ್ಟು ಗಾದೆಗಳು ರೂಪುಗೊಂಡಿವೆ. ಕನ್ನಡ ಸಾಹಿತ್ಯದಲ್ಲಿ ಮಾತಿಗಿಂತ ಮೌನಕ್ಕೆ ಹೆಚ್ಚಿನ ಮನ್ನಣೆ ನೀಡಲಾಗಿದೆ. ಅಲ್ಲಮನ ನಿಶ್ಯಬ್ದದ ಪರಿಕಲ್ಪನೆ ಗಾಢವಾದುದು. ಆದರೆ ಕೊಲೆ, ಅನ್ಯಾಯ, ಅತ್ಯಾಚಾರ ಮುಂತಾದ ಪ್ರಕ್ಷುಬ್ಧ ಸಂದರ್ಭಗಳಲ್ಲಿ ಮಾತನಾಡದೆ ಮೌನವಾಗಿರುವುದು ಅಪರಾಧ. ಸಾರ್ತ್ರೆ ಹೇಳಿದ 'ಹಿಟ್ಲರ್‌ಗೆ ನಾನೂ ಜವಾಬ್ದಾರ' ಈ ಹಿನ್ನೆಲೆಯಿಂದ ಮಹತ್ವದ್ದೆನಿಸುತ್ತದೆ.

ನಮ್ಮ ಕೆಲವು ಸಾಹಿತಿಗಳು ಮಾತಿನ ಮಲ್ಲರೂ ಆಗಿದ್ದರು. ಬೇಂದ್ರೆಯವರಿಗೆ ಬಹಳ ಹೊತ್ತು ಮಾತನಾಡದಿದ್ದರೆ ಆಗುತ್ತಿರಲಿಲ್ಲ. ಯಾವ

